CCE RR/PR/NSR/NSPR(B)/777/3035

**B**

**ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ – 1**

**MARCH/APRIL 2024 EXAMINATION-1**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR/PR/NSR/NSPR**
**Reduced Syllabus**

Question Paper Serial No.

**ಸಂಕೇತ ಸಂಖ್ಯೆ : 95-K**
**Code No. : 95-K**

# ವಿಷಯ : ಸಮಾಜಶಾಸ್ತ್ರ

# Subject : SOCIOLOGY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / NSR / NSPR)**

ದಿನಾಂಕ : 02. 04. 2024 ] [ Date : 02. 04. 2024

ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ***ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

SOCIOLOGY

ಇಲ್ಲಿಂದ ಕತ್ತರಿಸಿ

**02. 04. 2024**

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಡಾ. ರಾಜ್‌ಕುಮಾರ್‌ರವರ ಚಲನಚಿತ್ರಗಳನ್ನು ನೋಡಿದ್ದರಿಂದಾದ ಪರಿಣಾಮ

(A) ಆದಾಯ ಹೆಚ್ಚಾಯಿತು

(B) ನೇತ್ರದಾನ ಹೆಚ್ಚಾಯಿತು

(C) ದೂರದರ್ಶನ ಚಾನೆಲ್‌ಗಳು ಹೆಚ್ಚಾದವು

(D) ಸಮೂಹ ಮಾಧ್ಯಮ ನೀತಿ ಜಾರಿಗೆ ಬಂದಿತು

2. ಹೋಂ ರೂಲ್ ಚಳವಳಿಯು ಮೊದಲಿಗಿಂತ ಹತ್ತರಷ್ಟು ಬಲವಾಯಿತು. ಏಕೆಂದರೆ,

(A) ಮಹಿಳೆಯರ ಭಾಗವಹಿಸುವಿಕೆ

(B) ಮೊದಲ ದುಂಡು ಮೇಜಿನ ಸಭೆಯ ವಿಫಲತೆ

(C) ಗಾಂಧೀಜಿಯವರ ಸತ್ಯಾಗ್ರಹ

(D) ಅರಬಿಂದೋ ಘೋಷ್‌ರವರ ಭಾಗವಹಿಸುವಿಕೆ

3. ದಿಲೀಪ್ ಸಿಂಗ್ ಬೂರಿಯಾ ಆಯೋಗವು 1996 ರಲ್ಲಿ ರಚನೆಯಾಯಿತು. ಏಕೆಂದರೆ,

(A) ಸಮೂಹ ಮಾಧ್ಯಮಗಳ ಬಳಕೆಯನ್ನು ಪ್ರೋತ್ಸಾಹಿಸುವುದು

(B) ಜಾತಿ ಪದ್ಧತಿಯನ್ನು ನಿರ್ಬಂಧಿಸುವುದು

(C) ಮಹಿಳೆಯರ ಸ್ಥಾನಮಾನದ ಸಬಲೀಕರಣ

(D) ಬುಡಕಟ್ಟು ಸಮುದಾಯದ ಅಭಿವೃದ್ಧಿ ಮತ್ತು ಕಲ್ಯಾಣ

4. 1850 ರ ಜಾತಿ ಅನರ್ಹತೆಗಳ ನಿರ್ಮೂಲನಾ ಕಾಯಿದೆಯ ಮುಖ್ಯ ಗುರಿ

(A) ವಿಧವೆಯರ ಪುನರ್ವಿವಾಹವನ್ನು ನಿರ್ಬಂಧಿಸುವುದು

(B) ಅಸಂಘಟಿತ ಕಾರ್ಮಿಕರನ್ನು ನಿರ್ಬಂಧಿಸುವುದು

(C) ಜಾತಿ ಹೆಸರಿನಲ್ಲಿ ಮೂಢನಂಬಿಕೆಗಳನ್ನು ನಿರ್ಬಂಧಿಸುವುದು

(D) ಜಾತಿಯ ಹೆಸರಿನಲ್ಲಿ ಯಾವುದೇ ವ್ಯಕ್ತಿಯ ಸಾಮಾಜಿಕ ಹಾಗೂ ಸಾರ್ವಜನಿಕ ಹಕ್ಕುಗಳನ್ನು ಕಸಿಯುವುದನ್ನು ನಿರ್ಬಂಧಿಸುವುದು

5. ಅನಿಯೋಜಿತ ಬದಲಾವಣೆಗೆ ಒಂದು ಉದಾಹರಣೆ

(A) ಧರ್ಮ

(B) ಅಣೆಕಟ್ಟು ನಿರ್ಮಾಣ

(C) ಅನಾವೃಷ್ಟಿ

(D) ಸಾಮಾಜಿಕ ಅರಣ್ಯ

6. ಬುಡಕಟ್ಟು ಸಮುದಾಯವನ್ನು 'ಗಿರಿಜನರು' ಎಂದು ಕರೆದವರು

(A) ಮಹಾತ್ಮ ಗಾಂಧೀಜಿ

(B) ಮಹರ್ಷಿ ಕರ್ವೆ

(C) ಡಾ. ಬಿ.ಆರ್. ಅಂಬೇಡ್ಕರ್

(D) ದಯಾನಂದ ಸರಸ್ವತಿ

7. ಕರ್ನಲ್ ಲಕ್ಷ್ಮೀ ಈ ಸೇನೆಯ ಮಹಿಳಾ ಘಟಕದ ನಾಯಕಿಯಾಗಿದ್ದರು

(A) ರಾಯಲ್ ವಾಯುಸೇನೆ

(B) ಪ್ರಜಾಸೇನೆ

(C) ಕರ್ನಾಟ ಬಲ

(D) ಭಾರತೀಯ ರಾಷ್ಟ್ರೀಯ ಸೇನೆ

8. 'ಕ್ಯಾಸ್ಟ್'ದ ಅರ್ಥವೇನೆಂದರೆ

(A) ತಳಿ

(B) ವಿವಾಹದ ಒಂದು ವಿಧ

(C) ಸಂಪ್ರದಾಯ

(D) ಪ್ರಾಂತ್ಯ

9. ಬಾಲಗಂಗಾಧರ ತಿಲಕರು ಪ್ರಕಟಿಸಿದ ವಾರ್ತಾಪತ್ರಿಕೆ

(A) ಮೂಕನಾಯಕ

(B) ದಿ ಬೆಂಗಾಲ್

(C) ದಿ ಹಿಂದೂ

(D) ಕೇಸರಿ

10. ರಷ್ಯಾದ ಜನರು ಇವರ ಸಿದ್ಧಾಂತದಿಂದ ಪ್ರಭಾವಿತರಾಗಿದ್ದರು

(A) ಅಬ್ರಹಾಂ ಲಿಂಕನ್

(B) ಕಾರ್ಲ್ ಮಾರ್ಕ್ಸ್

(C) ಅಡಾಲ್ಫ್ ಹಿಟ್ಲರ್

(D) ನೆಪೋಲಿಯನ್

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

**5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಎಸ್.ಎನ್.ಡಿ.ಟಿ. ವಿಶ್ವವಿದ್ಯಾಲಯ | (i) ವಿವೇಕಾನಂದ |
| (B) ಬ್ರಹ್ಮ ಸಮಾಜ | (ii) ದಯಾನಂದ ಸರಸ್ವತಿ |
| (C) ಮಹಿಳಾ ಶಿಕ್ಷಣ | (iii) ಮಹಾತ್ಮಾ ಗಾಂಧಿ |
| (D) ರಾಮಕೃಷ್ಣ ಮಿಷನ್ | (iv) ಬಾಲಗಂಗಾಧರ ತಿಲಕ್ |
| (E) ಆರ್ಯ ಸಮಾಜ | (v) ಮಹರ್ಷಿ ಕರ್ವೆ |
| | (vi) ರಾಜಾ ರಾಮ್‌ಮೋಹನ್ ರಾಯ್ |
| | (vii) ಜ್ಯೋತಿರಾವ್ ಫುಲೆ |

**III.** **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಸಾಮಾಜಿಕ ಬದಲಾವಣೆ ಎಂದರೇನು ?

13. ಕರ್ನಾಟಕದಲ್ಲಿ ಬ್ರಾಹ್ಮಣೇತರ ಚಳವಳಿಯ ಪರಿಣಾಮವೇನು ?

14. ಕಿಂಗ್ಸ್‌ಲೇ ಡೇವಿಸ್‌ರ ಪ್ರಕಾರ ಸಾಮಾಜಿಕ ಬದಲಾವಣೆಯನ್ನು ವ್ಯಾಖ್ಯಾನಿಸಿ.

15. ಆಧುನಿಕರಣದ ಮುಖ್ಯ ಗುರಿಯನ್ನು ತಿಳಿಸಿ.

16. ವಿಶೇಷ ವಿವಾಹ ಕಾಯ್ದೆ ( 1872 ) ಯನ್ನು ಏಕೆ ಜಾರಿಗೆ ತರಲಾಯಿತು ?

17. 'ಕ್ಯಾಸ್ಟ್ ಅಂಡ್ ರೇಸ್ ಇನ್ ಇಂಡಿಯಾ' ಎಂಬ ಪುಸ್ತಕವನ್ನು ಬರೆದವರು ಯಾರು ?

18. ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಯಾರು ?

19. ಡಾ. ಬಿ.ಆರ್. ಅಂಬೇಡ್ಕರ್‌ರವರು ಪ್ರಕಟಿಸಿದ ವಾರ್ತಾ ಪತ್ರಿಕೆಯನ್ನು ಹೆಸರಿಸಿ.

20. 'ಬ್ಲಾಕ್ ಪದ್ಧತಿ' ಯನ್ನು ಏಕೆ ಪರಿಚಯಿಸಲಾಯಿತು ?

21. 'ಸಿಲಿಕಾನ್ ವ್ಯಾಲಿ' ಎಂದು ಯಾವ ನಗರ ಪ್ರಸಿದ್ಧವಾಗಿದೆ ?

22. ಆದಿವಾಸಿಗಳನ್ನು 'ಪರಿಶಿಷ್ಟ ಬುಡಕಟ್ಟು'ಗಳೆಂದು ಸೂಚಿಸಿರುವ ನಮ್ಮ ಸಂವಿಧಾನದ ವಿಧಿಯನ್ನು ಹೆಸರಿಸಿ.

23. ಭಾರತದಲ್ಲಿ ಮಹಿಳೆಯರ ಶಿಕ್ಷಣಕ್ಕೆ ಬೆಂಬಲ ನೀಡಿದ ಬ್ರಿಟಿಷ್ ವೈಸರಾಯ್ ಯಾರು ?

24. ಸಾಂಪ್ರದಾಯಿಕ ವಿವಾಹ ಪದ್ಧತಿಯಲ್ಲಿ ಬದಲಾವಣೆ ಉಂಟಾಗಲು ಕಾರಣವೇನು ?

25. ವೇದಗಳ ಕಾಲದ ಮಹಿಳಾ ವಿದ್ವಾಂಸರನ್ನು ಹೆಸರಿಸಿ.

26. ಎಸ್.ಎಫ್. ನಾಡಲ್‌ರವರು 'ಬುಡಕಟ್ಟು' ಪದಕ್ಕೆ ನೀಡಿರುವ ಅಭಿಪ್ರಾಯವನ್ನು ತಿಳಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಆಧುನೀಕರಣಕ್ಕೆ ಪ್ರಮುಖ ಕಾರಣಗಳೇನು ?

28. ಕೈಗಾರಿಕೀಕರಣದ ಪರಿಣಾಮಗಳಾವುವು ?

29. ಕಚ್ಚಾ ಆಹಾರ ಪಕ್ಕಾ ಆಹಾರಕ್ಕಿಂತ ಹೇಗೆ ಭಿನ್ನವಾಗಿದೆ ?

30. ಶಿಕ್ಷಣ ಜನರ ದೃಷ್ಟಿಕೋನವನ್ನು ಹೇಗೆ ಬದಲಿಸುತ್ತದೆ ?

31. ಸಮೂಹ ಮಾಧ್ಯಮಗಳ ದುಷ್ಪರಿಣಾಮಗಳಾವುವು ?

32. ವಾರ್ತಾಪತ್ರಿಕೆಗಳ ಪ್ರಮುಖ ವಿಧಗಳು ಯಾವುವು ?

33. ಜಾತಿ ಪದ್ಧತಿಯ ಕಾರ್ಯಾಚರಣೆಯನ್ನು ನಿಯಂತ್ರಿಸಲು ಲಭ್ಯವಿರುವ ವ್ಯವಸ್ಥೆಗಳನ್ನು ಹೆಸರಿಸಿ.

34. ಬುಡಕಟ್ಟುಗಳ ಬದಲಾವಣೆಯಲ್ಲಿ ಸರ್ಕಾರದ ಪಾತ್ರವೇನು ?

35. ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಬುಡಕಟ್ಟು ಸಮುದಾಯಕ್ಕೆ ಒದಗಿಸಲಾದ ಸೌಲಭ್ಯಗಳಾವುವು ?

36. ನಮ್ಮ ಸಂವಿಧಾನದ 15ನೇ ವಿಧಿಯ ಮುಖ್ಯ ಗುರಿ ಏನು ?

37. ಮಹಿಳೆಯರ ಪ್ರಗತಿಗಾಗಿ ಬ್ರಿಟಿಷರ ಕಾಲದಲ್ಲಿ ಪ್ರಮುಖ ಪಾತ್ರವಹಿಸಿದ ಮಹಿಳಾ ಸಂಘಟನೆಗಳಾವುವು ?

38. ಮಹಿಳಾ ಸಬಲೀಕರಣಕ್ಕೆ ಕಾರಣಗಳನ್ನು ವಿವರಿಸಿ.

39. ಡಾ. ಬಿ.ಆರ್. ಅಂಬೇಡ್ಕರರ ನೇತೃತ್ವವಹಿಸಿದ ಚಳವಳಿಗಳು ಯಾವುವು ?

40. ದುರ್ಬಲ ವರ್ಗದವರಲ್ಲಿ ಜಾಗೃತಿ ಮೂಡಿಸುವಲ್ಲಿ ಶಿಕ್ಷಣದ ಪಾತ್ರವೇನು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. "ವಿಜ್ಞಾನ ಮತ್ತು ತಂತ್ರಜ್ಞಾನ ಸಾಮಾಜಿಕ ಬದಲಾವಣೆಯನ್ನು ತರುವುದು." – ಈ ಹೇಳಿಕೆಯನ್ನು ವಿಶ್ಲೇಷಿಸಿ.

42. ಸಾಮಾಜಿಕ ಚಳವಳಿಗಳ ಗುರಿಗಳಾವುವು ?

43. ವಿವಾಹಕ್ಕೆ ಸಂಬಂಧಿಸಿದ ಕಾನೂನುಗಳನ್ನು ಪಟ್ಟಿಮಾಡಿ.

44. ದೂರದರ್ಶನ ವ್ಯಾಪ್ತಿಯನ್ನು ವಿವರಿಸಿ.

45. ಗಣಕಯಂತ್ರದ ಉಪಯುಕ್ತತೆಗಳನ್ನು ತಿಳಿಸಿ.

46. ಜಾತಿ ಪದ್ಧತಿಯನ್ನು ವಿರೋಧಿಸಿ ಭಾರತದಲ್ಲಿ ಸ್ಥಾಪನೆಯಾದ ಪ್ರಮುಖ ಧರ್ಮಗಳಾವುವು ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಭಾರತದಲ್ಲಿ ಬುಡಕಟ್ಟು ಸಮಿತಿಯ ಕಾರ್ಯಗಳಾವುವು ?

DO NOT WRITE ANYTHING HERE